ಶಾಲೆ ಆವರಣದಲ್ಲಿ ಸೊಪ್ಪು, ತರಕಾರಿ ಬೆಳೆದ ಮಕ್ಕಳು

ಚನ್ನಪಟ್ಟಣ: ಪಟ್ಟಣದ ಬಾಲು ಪಬ್ಲಿಕ್ ಶಾಲೆಯಲ್ಲಿ ಸಾವಯವ ಕೃಷಿ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಪ್ರಕೃತಿ ಪ್ರೀತಿ ಮತ್ತು ಕೃಷಿಯ ಅರಿವು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಈ ಹಿನ್ನೆಲೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಅಪರ್ಣ ಅವರು ಶಾಲೆಗೆ ಭೇಟಿ ನೀಡಿ ಮಕ್ಕಳೇ ಬೆಳೆಸಿದ ಸಾವಯವ ತೋಟ ವೀಕ್ಷಿಸಿ ಶ್ಲಾಘಿಸಿದರು. ಶಾಲಾ ಆವರಣದಲ್ಲಿ ಮಕ್ಕಳೇ ಬೆಳೆ ತರಕಾರಿ, ಸೊಪ್ಪು ನೋಡಿದ ಅವರು, ಈ ಪೀಳಿಗೆಯ ಮಕ್ಕಳಲ್ಲಿ ಕೃಷಿ ಬಗ್ಗೆ ಆಸಕ್ತಿ ಮೂಡಿಸುವುದು ಅಗತ್ಯವಾಗಿದೆ ಎಂದರು. ಶಾಲಾ ಆವರಣದಲ್ಲೇ ಬೆಳೆದ ವಿವಿಧ ತರಕಾರಿ ಮತ್ತು ಸೊಪ್ಪುಗಳನ್ನು ಏಳನೇ ತರಗತಿ ವಿದ್ಯಾರ್ಥಿಗಳು ಕಟಾವು ಮಾಡಿ ತಂದು ಶಿಕ್ಷಕರಿಗೆ ಉಡುಗೊರೆಯಾಗಿ ನೀಡಿದರು. ಈ ಚಟುವಟಿಕೆ ವಿದ್ಯಾರ್ಥಿಗಳಲ್ಲಿ ಕೃಷಿಯ ಮೇಲಿನ ಗೌರವ, ಸ್ವಾವಲಂಬನೆಗೆ ಸಹಾಯಕವಾಗಿದೆ. ಶಾಲಾ ಆಡಳಿತ ಮಂಡಳಿ ಈ ರೀತಿಯ ರಚನಾತ್ಮಕ ಕಾರ್ಯಾಗಾರದ ಮೂಲಕ ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳ ಜತೆಗೆ ಜೀವನ ಕೌಶಲ್ಯ ಕಲಿಸುವ ಪ್ರಯತ್ನ ಶ್ಲಾಘನೀಯ ಎಂದರು. ಶಾಲೆಯ ಜಂಟಿ ಕಾರ್ಯದರ್ಶಿ ವಿ ಬಾಲಸುಬ್ರಹ್ಮಣ್ಯಂ ಶಾಲೆಯ ಧರ್ಮದರ್ಶಿ ಕವಿತಾ ಬಾಲಸುಬ್ರಹ್ಮಣ್ಯಂ, ಮುಖ್ಯ ಶಿಕ್ಷಕಿ ಕವಿತಾ ಶಿಕ್ಷಕ ವರ್ಗದವರಿದ್ದರು.

ದೈಹಿಕ–ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಿ

ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳುವಂತೆ ಮಹಿಳೆಯರಿಗೆ ಡಾ.ಪ್ರತಿಮಾ ಸಲಹೆ

WOMEN EMPOWERMENT CELL
ಕರ್ನಾಟಕ ಸರ್ಕಾರ
ಸರ್ಕಾರಿ ಪ್ರಥಮ ದರ್ಜೆ ಕಾಲೇ
SMT GOWRAMMA K SRI D K JAMIL GOWDA GOVERNMENT DEGREE COLLEGE

ರಾಮನಗರ: ಪ್ರತಿಯೊಬ್ಬ ಮಹಿಳೆಯರು ತಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಕುರಿತು ಅರಿವು ಹೊಂದುವುದು ಮುಖ್ಯ ಎಂದು ಕನಕಪುರದ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ.ಪ್ರತಿಮಾ ಅವರು ಹೇಳಿದರು.

ಕನಕಪುರದ ಕೋಡಿಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಮಹಿಳಾ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಮಹಿಳೆಯರಿಗೆ ವಯಸ್ಸಿನ ವಿವಿಧ ಹಂತಗಳಲ್ಲಿ ಆರೋಗ್ಯ ಸಮಸ್ಯೆ ಎದುರಾಗಲಿವೆ. 25 ರಿಂದ 35 ವರ್ಷ ವಯಸ್ಸಿನ ಯುವ ಮಹಿಳೆಯರು ಮಾಸಿಕ ಋತುಚಕ್ರದ ವೇಳೆ ನೋವು ರಕ್ತಹೀನತೆ ಕಾಡುತ್ತದೆ. ಇದನ್ನು ತಪ್ಪಿಸಲು ಪೋಷಕಾಂಶಯುಕ್ತ ಆಹಾರ ಸೇವಿಸಬೇಕು. ಸ್ವಚ್ಛತೆ ಕಾಪಾಡಿಕೊಳ್ಳಬೇಕು. ನಿಯಮಿತ ವೈದ್ಯಕೀಯ ತಪಾಸಣೆ, ಲಸಿಕೆ ಪಡೆಯುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕೆಂದರು.

ಆರೋಗ್ಯಕರ ಜೀವನ ನಡೆಸಿ: 36 ರಿಂದ 50 ವರ್ಷದ ಮಧ್ಯ ವಯಸ್ಸಿನ ಮಹಿಳೆಯರ ಗರ್ಭಾಶಯದ ಆರೋಗ್ಯಕ್ಕಾಗಿ ನಿಯಮಿತ ಗೈನಕಾಲಜಿ ತಪಾಸಣೆ, ಪ್ಯಾಪ್ ಸ್ಮಿಯರ್ ಪರೀಕ್ಷೆ (ಗರ್ಭಾಶಯದ ಆರೋಗ್ಯಕ್ಕಾಗಿ), ಕುಟುಂಬ ಯೋಜನೆಯೊಂದಿಗೆ ಆರೋಗ್ಯಕರ ಜೀವನಶೈಲಿಗಾಗಿ ಆಹಾರ, ವ್ಯಾಯಾಮ, ಒತ್ತಡ ನಿಯಂತ್ರಣ ರೂಢಿಸಿಕೊಳ್ಳಬೇಕು. ಗರ್ಭಧಾರಣೆಯ ಅವಧಿ ಗರ್ಭಪೂರ್ವ ಆರೈಕೆ ಅತ್ಯಂತ ಮುಖ್ಯ, ನಿಯಮಿತ ವೈದ್ಯರ ಭೇಟಿ, ಐರನ್, ಫೋಲಿಕ್ ಆಮ್ಲ ಪೂರಕಗಳು, ತಾಯಿ ಮತ್ತು ಮಗುವಿನ ಆರೋಗ್ಯ ಮೇಲ್ವಿಚಾರಣೆ ಮುಖ್ಯ ಎಂದು ತಿಳಿಸಿದರು.

ಮಹಿಳಾ ಸಂವೇದನೆ ಸಾಹಿತ್ಯ: ಕನಕಪುರ ತಾಲ್ಲೂಕಿನ ರೂರಲ್ ಕಾಲೇಜಿನ ಕನ್ನಡ ವಿಭಾಗದ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ದೀಪಿಕಾ ಬಿ. ಅವರು ಮಾತನಾಡಿ, ಸಾಹಿತ್ಯದ ನೆಲೆಗಟ್ಟಿನಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ವಿವರಿಸಿದರು. ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರಾರಂಭದಲ್ಲಿ ಮಹಿಳೆಯರ ಬರವಣಿಗೆ ಸೀಮಿತವಾಗಿದ್ದರೂ, ಕಾಲಕ್ರಮೇಣ ಅವರು ತಮ್ಮದೇ ಆದ ಧ್ವನಿಯನ್ನು ನಿರ್ಮಿಸಿಕೊಂಡರು ಎಂದು ಹೇಳಿದರು. ಕವಯಿತ್ರಿಯರಾದ ಅಕ್ಕ ಮಹಾದೇವಿ ಭಕ್ತಿ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದರು. ಆಧುನಿಕ ಯುಗದಲ್ಲಿ ತ್ರಿವೇಣಿ, ಅನಿತಾ ದೇಸಾಯಿ (ಕನ್ನಡ ಮೂಲದ ಲೇಖಕಿ), ಸಾರಾ ಅಬೂಬಕ್ಕರ್, ವೈದೇಹಿ ಹಲವರು ಮಹಿಳಾ ಸಬಲೀಕರಣ ಹಾಗೂ ಮಹಿಳಾ ಸಂವೇದನೆ ಸಾಹಿತ್ಯಕ್ಕೆ ದನಿಯಾಗಿದ್ದಾರೆ.

ಮಹಿಳೆಯರ ಸ್ವಾವಲಂಬನೆ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರಾಂಶುಪಾಲರಾದ ಡಾ.ವೆಂಕಟೇಶ್ ಅವರು ಮಾತನಾಡಿ, ಮಹಿಳಾ ಸಬಲೀಕರಣವು ಸಮಾಜದ ಸಮಗ್ರ ಅಭಿವೃದ್ಧಿಗೆ ಅತ್ಯಂತ ಅಗತ್ಯವಾಗಿದ್ದು, ಇದರ ವಿವಿಧ ಆಯಾಮಗಳಿವೆ. ಶಿಕ್ಷಣ ಸಬಲೀಕರಣದ ಮೂಲಕ ಮಹಿಳೆಯರು ಜ್ಞಾನ ಪಡೆದು ತಮ್ಮ ಹಕ್ಕುಗಳನ್ನು ಅರಿತುಕೊಳ್ಳುತ್ತಾರೆ. ಆರ್ಥಿಕ ಸಬಲೀಕರಣವು ಉದ್ಯೋಗ, ಉದ್ಯಮಶೀಲತೆ ಮತ್ತು ಸ್ವಾವಲಂಬನೆ ಅವರನ್ನು ಆರ್ಥಿಕವಾಗಿ ಸ್ವತಂತ್ರರನ್ನಾಗಿಸುತ್ತದೆ ಎಂದರು. ಸಾಮಾಜಿಕ ಸಬಲೀಕರಣವು ಲಿಂಗ ಸಮಾನತೆ, ಮಾನ್ಯತೆ ಮತ್ತು ಗೌರವ ಒದಗಿಸುತ್ತದೆ. ರಾಜಕೀಯ ಸಬಲೀಕರಣದ ಮೂಲಕ ಮಹಿಳೆಯರು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ. ಕಾನೂನು ಸಬಲೀಕರಣವು ಮಹಿಳೆಯರ ಹಕ್ಕುಗಳನ್ನು ರಕ್ಷಿಸುವುದರ ಜತೆಗೆ ಅನ್ಯಾಯದ ವಿರುದ್ಧ ಹೋರಾಡಲು ಸಹಕಾರಿಯಾಗಿದೆ. ಈ ಎಲ್ಲ ರೂಪಗಳ ಸಬಲೀಕರಣವು ಮಹಿಳೆಯರನ್ನು ಶಕ್ತಿಶಾಲಿಗಳಾಗಿ ರೂಪಿಸಿ ಸಮಾನತೆ ಮತ್ತು ನ್ಯಾಯಯುತ ಸಮಾಜ ನಿರ್ಮಾಣಕ್ಕೆ ನೆರವಾಗುತ್ತದೆ ಎಂದು ಆರೋಗ್ಯ ಮತ್ತು ಮಹಿಳೆಯರ ಸಬಲೀಕರಣದ ಮಹತ್ವದ ಬಗ್ಗೆ ತಿಳಿಸಿದರು. ಮಹಿಳಾ ಸಬಲೀಕರಣ ಕೋಶದ ಸಂಯೋಜಕರಾದ ವಿಶಾಲಾಕ್ಷಿ ಅವರು ಕಾರ್ಯಕ್ರಮ ಉದ್ದೇಶ ತಿಳಿಸಿದರು. ಕನಕಪುರ ರೂರಲ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಸುಮಲತಾ ಎಸ್.ಎನ್. ಅವರು ಮಾತನಾಡಿದರು. ಕಾಲೇಜಿನ ಪ್ರಾಧ್ಯಾಪಕರಾದ ಅಶ್ವಥ್ ನಾರಾಯಣ, ಅವಿನಾಶ್, ರಾಧಾಕೃಷ್ಣ, ಪ್ರಿಯಾಂಕ, ಚೈತ್ರ ಭಾಗವಹಿಸಿದರು.

ನಲ್ಲೂರು: ಶಿಕ್ಷಕಿ ಸುಶೀಲಮ್ಮಗೆ ಬೀಳ್ಕೊಡುಗೆ

28 ವರ್ಷ ಸೇವೆ ಸಲ್ಲಿಸಿದ ಶಿಕ್ಷಕಿ ವಿಶ್ರಾಂತ ಜೀವನ ನೆಮ್ಮದಿ ತರಲಿ: ಶಿಕ್ಷಕರು

ಸಂ.ಕ.ಸಮಾಚಾರ ನಲ್ಲೂರು

ಸರ್ಕಾರಿ ಶಾಲೆಯಲ್ಲೇ ತಾವು 28 ವರ್ಷ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದು, ತಮಗೆ ಸಹಕರಿಸಿದ ಶಾಲೆಯ ಮುಖ್ಯ ಶಿಕ್ಷಕ, ಸಹ ಶಿಕ್ಷಕರು, ಎಸ್‌ಡಿಎಂಸಿ ಸಹಕಾರಕ್ಕೆ ಶಿಕ್ಷಕಿ ಸುಶೀಲಮ್ಮ ಧನ್ಯವಾದ ತಿಳಿಸಿದರು. ದೇವನಹಳ್ಳಿ ತಾಲೂಕು ಬೆಟ್ಟಕೋಟೆ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಸುಮಾರು 28 ವರ್ಷ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಬಿಳ್ಕೊಡುಗೆ ಸ್ವೀಕರಿಸಿ ಮಾತನಾಡಿದರು. 1998ರಲ್ಲಿ ಬೆಟ್ಟಕೋಟೆ ಶಾಲೆಗೆ ಶಿಕ್ಷಕಿಯಾಗಿ ಸರ್ಕಾರದಿಂದ ನೇಮಕವಾಗಿದ್ದೆ. ಎಲ್ಲರ ಸಹಕಾರದಿಂದ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಿದ್ದೇನೆ. ಇಂದು ನಮ್ಮ ಸೇವೆ ವಯೋ ನಿವೃತ್ತಿ ಆಗಿರುವುದು ಸರ್ಕಾರ ಶಾಲೆಯಿಂದ ಒಂದಿದ್ದೇವೆ. ನಮ್ಮ ಸೇವೆ ನಮಗೆ ತೃಪ್ತಿಕರವಾಗಿದೆ ಎಂದರು. ಎಸ್‌ಡಿಎಂಸಿ ಅಧ್ಯಕ್ಷರಾದ ರವಿ ಮಾತನಾಡಿ, ನಮ್ಮ ಸರ್ಕಾರಿ ಶಾಲೆಯಲ್ಲಿ ಒಳ್ಳೆಯ ವಿದ್ಯಾಭ್ಯಾಸ ಮಕ್ಕಳಿಗೆ ನೀಡುತ್ತಿದ್ದ ಶಿಕ್ಷಕಿ ಸುಶೀಲಮ್ಮ ಅವರು ಮಂಗಳವಾರ ನಿವೃತ್ತಿ ಹೊಂದಿದ್ದು ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಶಾಲಾ ಮುಖ್ಯ ಶಿಕ್ಷಕರಾದ ಶಿವಕುಮಾರ್ ಮಾತನಾಡಿ, ನಮ್ಮ ಶಾಲೆ ಶಿಕ್ಷಕರು ಶಾಲಾ ಅಭಿವೃದ್ಧಿ ಸಮಿತಿ ಹಾಗೂ ಪೋಷಕರು ಶಿಕ್ಷಕರಿಗೆ ಒಳ್ಳೆಯ ಸಹಕಾರ ಹೇಳುತ್ತಿದ್ದಾರೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದವರು ನಮ್ಮ ಶಾಲೆಯನ್ನು ಉತ್ತಮವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಜೂನ್ ಒಂದರಿಂದ ಎಂಟನೇ ತರಗತಿಯ ನಮ್ಮ ಶಾಲೆಯಲ್ಲಿ ನಡೆಯುತ್ತದೆ ಎಂದರು. ಇದೇ ವೇಳೆ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ಕುಶಾಲ್ ಕುಮಾರ್, ರಾಮಾಂಜಿನಪ್ಪ, ವೆಂಕಟೇಶ್, ತ್ಯಾಗರಾಜ್, ವರಲಕ್ಷ್ಮಿ, ಲಲಿತಮ್ಮ, ಉಪಾಧ್ಯಕ್ಷರಾದ ಶಾಮಲಾ, ತ್ಯಾಗರಾಜ್, ರಾಜು, ಕೆಂಪಣ್ಣ, ಕೃಷ್ಣಮೂರ್ತಿ ಹಲವರಿದ್ದರು.

ಏ.10ರಂದು ಡೇರಿ ಸಂಘದ ಎಲೆಕ್ಷನ್

ಚನ್ನಪಟ್ಟಣ: ತಾಲೂಕಿನ ವಿರುಪಾಕ್ಷಿಪುರ ಹೋಬಳಿ ರಾಮೇಗೌಡನದೊಡ್ಡಿ ಡೇರಿ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ಏ.10ರಂದು ಚುನಾವಣೆ ನಿಗದಿಯಾಗಿದೆ. ಆಕಾಂಕ್ಷೆಯುಳ್ಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಏ.2 ಕೊನೆಯ ದಿನವಾಗಿರುತ್ತದೆ. ಏ.3ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅದೇ ದಿನ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಏ.4ರಂದು ಮಧ್ಯಾಹ್ನ 3 ಗಂಟೆವರೆಗೆ ನಾಮಪತ್ರ ಹಿಂಪಡೆಯಲು ಅವಕಾಶ ಇರುತ್ತದೆ ಹಾಗೂ ಇದೇ ದಿನ ಅಂತಿಮವಾಗಿ ಕಣದಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿಯು ಚಿಹ್ನೆ ಸಮೇತ ಪ್ರಕಟವಾಗಲಿದೆ. ಮತ ದಾನದ ಅವಶ್ಯಕತೆಯಿದ್ದಲ್ಲಿ ಏ.10ರ ಬೆಳಗ್ಗೆ 11ರಿಂದ2 ಗಂಟೆಯವರೆಗೆ ರಾಮೇಗೌಡನದೊಡ್ಡಿ ಡೇರಿ ಕಚೇರಿಯಲ್ಲಿ ಮತದಾನ ನಡೆಯಲಿದ್ದು, ಅದೇ ದಿನ ಮತ ಎಣಿಕೆ, ನಂತರ ಫಲಿತಾಂಶ ಪ್ರಕಟವಾಗಲಿದೆಎಂದು ರಿಟರ್ನಿಂಗ್ ಅಧಿಕಾರಿ ಉಮೇಶ್ ತಿಳಿಸಿದ್ದಾರೆ.

ಕರ್ಣಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ,
1ನೇ ಮಹಡಿ, ಎಫ್‌ಕೆಸಿಸಿಐ ಕಟ್ಟಡ,
ಕೆಂಪೇಗೌಡ ರಸ್ತೆ,
ಬೆಂಗಳೂರು – 560009.

Phone : 080-22955928(Gen)/22955929 (AGM)
E-Mail : blr.arm @ktkbank.com
Website : www.karnatakabank.bank.in
CIN : L85110KA1924PLC001128

ಸ್ವಾಧೀನತೆಯ ಪ್ರಕಟಣೆ (ಸ್ಥಿರಾಸ್ತಿಗೆ ಸಂಬಂಧಿಸಿದಂತೆ)

ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಷನ್ 13(12) ನಿಯಮ 3 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರಂತೆ **ದಿನಾಂಕ: 03.01.2026** ರಂದು ಈ ಕೆಳಕಂಡ ಸಾಲಗಾರರು/ ಜಾಮೀನುದಾರರು/ ಅಡಮಾನುದಾರರಿಗೆ ಈ ಕೆಳಗೆ ತಿಳಿಸಿದಂತೆ ತಗಾದೆ ನೋಟೀಸನ್ನು ನೀಡಲಾಗಿತ್ತು. **ಅವರುಗಳು (1) ಮೆ. ಕರಾವಳಿ ಕೋಳಿ ಮನೆ,** ಪ್ರತಿನಿಧಿಸುವ ಮಾಲೀಕರು ಶ್ರೀ ಪ್ರಕಾಶ್ ಶೆಟ್ಟಿ ಎಸ್. ವಿಳಾಸ: ನಂ.272, 12ನೇ ಕ್ರಾಸ್, ಬಿಟಿಎಸ್ ಬಸ್ ನಿಲ್ದಾಣದ ಎದುರು, ವಿಲ್ಸನ್ ಗಾರ್ಡನ್ ಬೆಂಗಳೂರು–560027 **(2) ಶ್ರೀ. ಪ್ರಕಾಶ್ ಶೆಟ್ಟಿ ಎಸ್.** ಬಿನ್ ಸಂಜೀವ ಶೆಟ್ಟಿ ಕೆ. **(3) ಶ್ರೀಮತಿ. ಶ್ಯಾಮಲಾ ಪಿ. ಶೆಟ್ಟಿ** ಕೋಂ ಪ್ರಕಾಶ್ ಶೆಟ್ಟಿ ಎಸ್. **ನಂ. 2 ಮತ್ತು 3 ರವರುಗಳ ವಿಳಾಸ :** ನಂ. 310, ಎಸ್‌ಎಲ್‌ಎಸ್ ಸರೋವರ್ ಅಪಾರ್ಟ್‌ಮೆಂಟ್, ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, ವಿರೂಪಾಕ್ಷಪುರ, ಕೊಡಿಗೇಹಳ್ಳಿ, ಬೆಂಗಳೂರು–560097 ಇವರುಗಳಿಗೆ **ಒಟ್ಟು ಮೊತ್ತ ರೂ. 44,09,297.99 (ರೂಪಾಯಿ ನಲವತ್ತನಾಲ್ಕು ಲಕ್ಷದ ಒಂಭತ್ತು ಸಾವಿರದ ಇನ್ನೂರ ತೊಂಭತ್ತೇಳು ಮತ್ತು ತೊಂಭತ್ತೊಂಭತ್ತು ಪೈಸೆ ಮಾತ್ರ) ಅಂದರೆ ಪಿಎಸ್‌ಓಡಿ ಖಾತೆ ಸಂಖ್ಯೆ 0987000600231901 ರ ಅಡಿಯಲ್ಲಿ ರೂ. 28,20,359.61 ಜೊತೆಗೆ ದಿನಾಂಕ: 01.01.2026 ರಿಂದ ಮುಂದಿನ ಬಡ್ಡಿ ಹಾಗೂ ಟಿಎಲ್ ಖಾತೆ ಸಂಖ್ಯೆ 0987001600619301 ರ ಅಡಿಯಲ್ಲಿ ರೂ. 10,12,959.38 ಜೊತೆಗೆ ದಿನಾಂಕ: 13.12.2025 ರಿಂದ ಮುಂದಿನ ಬಡ್ಡಿ ಹಾಗೂ ಟಿಎಲ್ ಖಾತೆ ಸಂಖ್ಯೆ 0987001600629601ರ ಅಡಿಯಲ್ಲಿ ರೂ. 5,75,979.00 ಜೊತೆಗೆ ದಿನಾಂಕ: 30.12.2025 ರಿಂದ** ಕ್ರಮವಾಗಿ ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ಈ ಮೇಲೆ ತಿಳಿಸಿದ ನೋಟೀಸ್ ತಲುಪಿದ **60 ದಿನಗಳ** ಒಳಗಾಗಿ ಪಾವತಿಸಲು ತಿಳಿಸಲಾಗಿತ್ತು.

ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಹಣವನ್ನು ಮರುಪಾವತಿಸಲು ವಿಫಲರಾದ್ದರಿಂದ ಮೇಲೆ ತಿಳಿಸಿದ ಕಾಯ್ದೆಯ ಸೆಕ್ಷನ್ 13(4) ಹಾಗೂ ಮೇಲೆ ತಿಳಿಸಿದ ನಿಯಮ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆಳಸಹಿದಾರರು ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು **ದಿನಾಂಕ 27ನೇ ಮಾರ್ಚ್ 2026 ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆಂದು** ಸಾಲಗಾರರು/ ಜಾಮೀನುದಾರರು/ಅಡಮಾನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರು/ಜಾಮೀನುದಾರರು/ಅಡಮಾನುದಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಸ್ವತ್ತಿನ ಬಗ್ಗೆ ಯಾರೂ ವ್ಯವಹರಿಸಕೂಡದು, ವ್ಯವಹರಿಸಿದ್ದೇ ಆದಲ್ಲಿ **ಕರ್ಣಾಟಕ ಬ್ಯಾಂಕ್ ಲಿ., ಬೆಂಗಳೂರು–ಸಾರಕ್ಕಿ ಲೇಔಟ್ ಶಾಖೆ,** ಇವರುಗಳ **ಒಟ್ಟು ಮೊತ್ತ ರೂ. 45,28,224.63 (ರೂಪಾಯಿ ನಲವತ್ತೈದು ಲಕ್ಷದ ಇಪ್ಪತ್ತೆಂಟು ಸಾವಿರದ ಇನ್ನೂರ ಇಪ್ಪತ್ತನಾಲ್ಕು ಮತ್ತು ಅರವತ್ತಮೂರು ಪೈಸೆ ಮಾತ್ರ) ಅಂದರೆ ಪಿಎಸ್‌ಓಡಿ ಖಾತೆ ಸಂಖ್ಯೆ 0987000600231901 ರ ಅಡಿಯಲ್ಲಿ ರೂ. 28,97,361.25 ಜೊತೆಗೆ ದಿನಾಂಕ: 01.03.2026 ರಿಂದ ಮುಂದಿನ ಬಡ್ಡಿ ಹಾಗೂ ಟಿಎಲ್ ಖಾತೆ ಸಂಖ್ಯೆ 0987001600619301 ರ ಅಡಿಯಲ್ಲಿ ರೂ. 10,41,106.38 ಜೊತೆಗೆ ದಿನಾಂಕ: 13.03.2026 ರಿಂದ ಮುಂದಿನ ಬಡ್ಡಿ ಹಾಗೂ ಟಿಎಲ್ ಖಾತೆ ಸಂಖ್ಯೆ 0987001600629601ರ ಅಡಿಯಲ್ಲಿ ರೂ. 5,89,757.00 ಜೊತೆಗೆ ದಿನಾಂಕ: 28.02.2026 ರಿಂದ** ಕ್ರಮವಾಗಿ ಮುಂದಿನ ಬಡ್ಡಿ + ಇತರೆ ಖರ್ಚು ವೆಚ್ಚಗಳನ್ನು ಪಾವತಿಸಬೇಕಾಗುವುದು.

[ಭದ್ರತಾ ಸ್ವತ್ತಿನ ಹಿಂದಕ್ಕೆ ಪಡೆಯಲು ಕಾಯ್ದೆಯ ಉಪವಿಭಾಗ 13(8)ರ ಅಡಿಯಲ್ಲಿ ನಮೂದಿಸಿದ ಸಮಯದ ಒಳಗೆ ಅವಕಾಶವಿರುವುದಾಗಿ ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ]

ಸ್ಥಿರಾಸ್ಥಿಯ ವಿವರ :

ಶ್ರೀ.ಪ್ರಕಾಶ್ ಶೆಟ್ಟಿ.ಎಸ್ ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗ ಗಳನ್ನೊಳಗೊಂಡಿರುವ ವಾಸಯೋಗ್ಯ **ಫ್ಲಾಟ್ ನಂ.310,** 3ನೇ ಮಹಡಿ, ಬ್ಲಾಕ್'ಎ', **"ಎಸ್‌ಎಲ್‌ಎಸ್ ಸರೋವರ್"** ಎಂದು ಕರೆಯಲ್ಪಡುವ ಮಲ್ಟಿ ಸ್ಟೋರ್ಡ್ ವಾಸಯೋಗ್ಯ ಕಟ್ಟಡದ ಬಿಲ್ಟ್ ಭೂಮಿಯ ಬಿಬಿಎಂಪಿ ಖಾತಾ ನಮ. 1510, 45/4 & 46/1, ಬೆಂಗಳೂರು, ಯಲಹಂಕ ಹೋಬಳಿ, ತಿಂಡ್ಲು ಗ್ರಾಮದ ಪರಿವರ್ತಿತ ಸರ್ವೆ ನಂ. 45/4 ಮತ್ತು 46/1 ಜೊತೆಗೆ ಸೂಪರ್ ಬಿಲ್ಟ್ ಅಪ್ ಪ್ರದೇಶ 1012 ಚದರ ಅಡಿ, ಜೊತೆಗೆ ಯುಡಿಎಸ್ ಭಾಗ 517 ಚದರ ಅಡಿ, ಹಾಗೂ ಒಂದು ಮುಚ್ಚಿದ ಕಾರು ನಿಲ್ಲಿಸುವ ಪ್ರದೇಶವನ್ನೊಳಗೊಂಡಿರುತ್ತದೆ. **ಸ್ವತ್ತಿನ ಚಕ್ಕುಬಂದಿ : ಸ್ವತ್ತಿನ ಚಕ್ಕುಬಂದಿ (ದಾಖಲೆ ಪ್ರಕಾರ): ಸರ್ವೆನಂ. 45/4 : ಪೂರ್ವಕ್ಕೆ:** ಸರ್ವೆ ನಂ.46, **ಪಶ್ಚಿಮಕ್ಕೆ:** ಸರ್ವೆ ನಂ. 46ರ ಉಳಿಕೆ ಭಾಗ, ಉತ್ತರಕ್ಕೆ : ಸರ್ವೆ ನಂ. 45/3, ದಕ್ಷಿಣಕ್ಕೆ : ಸರ್ವೆ ನಂ. 45/1, 6, 5. ಸರ್ವೆ ನಂ. 46/1 : ಪೂರ್ವಕ್ಕೆ : ಸರ್ವೆ ನಂ. 46ರ ಉಳಿಕೆ ಭಾಗ, ಪಶ್ಚಿಮಕ್ಕೆ : ಸರ್ವೆ ನಂ.45, ಉತ್ತರಕ್ಕೆ : ಸರ್ವೆ ನಂ. 36, ದಕ್ಷಿಣಕ್ಕೆ : ಸರ್ವೆ ನಂ. 46/2.

ಫ್ಲಾಟ್‌ನ ಚಕ್ಕುಬಂದಿ : ಪೂರ್ವಕ್ಕೆ : ಡೋರ್, ಪಶ್ಚಿಮಕ್ಕೆ : ಆಕಾಶಕ್ಕೆ ತೆರೆದ ಜಾಗ, ಉತ್ತರಕ್ಕೆ : ಫ್ಲಾಟ್ ನಂ.311, ದಕ್ಷಿಣಕ್ಕೆ : ಫ್ಲಾಟ್ ನಂ. 309.

ಸ್ಥಳ : ಬೆಂಗಳೂರು
ದಿನಾಂಕ: 27.03.2026

ಸಹಿ/– ಸಹಾಯಕ ಮಹಾ ಪ್ರಬಂಧಕರು & ಅಧಿಕೃತ ಅಧಿಕಾರಿ
ಕರ್ಣಾಟಕ ಬ್ಯಾಂಕ್ ಲಿ.,

ಸಾಲ ವಸೂಲಾತಿ ನ್ಯಾಯಮಂಡಳಿ II,
ಬೆಂಗಳೂರು ರಾಜಭವನ ರಸ್ತೆ, 4ನೇ ಮಹಡಿ,
ಬಿಎಸ್‌ಎನ್‌ಎಲ್ ಕಟ್ಟಡ, ಬೆಂಗಳೂರು
O.A.No.429/2020

ನಡುವೆ:
ಮೆಸ್. ಐಸಿಐಸಿಐ ಬ್ಯಾಂಕ್ ಲಿಮಿಟೆಡ್
ಶಾಖೆಯ ಕಚೇರಿ:
ನಂ. 4/10, ಮೈತ್ರೀ ಸೆಂಟರ್, ಹೊಸೂರು ರಸ್ತೆ,
ಬೊಮ್ಮನಹಳ್ಳಿ ಬೆಂಗಳೂರು–560 068.
.... **ಅರ್ಜಿದಾರರು**

ಮತ್ತು:

1. ಶ್ರೀ ಕೌಶಿಫ್ ಅನ್ಸಾರಿ
ಸಹೋದ್ಯೋಗಿ ದಿವಂಗತ ಶ್ರೀ ಶೇಖ್ ಯೂಸುಫ್ ಅನ್ಸಾರಿ, ಸುಮಾರು 33 ವರ್ಷ ವಯಸ್ಸು, ಹೂಡಿ ಮಸೀದಿಯ ಹಿಂದೆ, ಹೂಡಿ ವೃತ್ತದ ಬಳಿ, ಮಹಾದೇವಪುರ, ವೈಟ್‌ಫೀಲ್ಡ್, ಬೆಂಗಳೂರು–560048 ನಂ. 123, ಭಾವಸರ್ ಮಾರುಕಟ್ಟೆ ಹತ್ತಿರ, ಕೋಠಿ ಬಜಾರ್, ಗಾಂಧಿ ವಾರ್ಡ್, ಬೇತುಲ್, ಮಧ್ಯಪ್ರದೇಶ – 460001. ವಯಸ್ಸು ಸುಮಾರು 32 ವರ್ಷ ಮನೆ ನಂ. 1020, ಹೂಡಿ ಹಿಂದೆ, ಮಸೀದಿ, ಮಹದೇವಪುರ, ವೈಟ್‌ಫೀಲ್ಡ್, ಬೆಂಗಳೂರು– 560048.

2. ಶ್ರೀ ಶೋಯೆಬ್ ಅನ್ಸಾರಿ ತಂದೆ ಶ್ರೀ. ದಿವಂಗತ ಯೂಸುಫ್ ಅನ್ಸಾರಿ :ನಂ. 123, ಭಾವಸರ್ ಮಾರುಕಟ್ಟೆ ಹತ್ತಿರ, ಕೋಠಿ ಬಜಾರ್, ಗಾಂಧಿ ವಾರ್ಡ್, ಬೇತುಲ್, ಮಧ್ಯಪ್ರದೇಶ – 460001. ...**ಪ್ರತಿವಾದಿಗಳು**

1993 ರ ಸಾಲಗಳ ವಸೂಲಾತಿ ನ್ಯಾಯಮಂಡಳಿ (ಕಾರ್ಯವಿಧಾನ) ನಿಯಮಗಳ ನಿಯಮ 23(VIII) ರ ಅಡಿಯಲ್ಲಿ ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆಯ ಮೂಲಕ ಸಮನ್ಸ್ ಜಾರಿ ಮಾಡಲಾಗಿದೆ.

ಆದಾಗ್ಯೂ: ಅರ್ಜಿದಾರರು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆ ಕಾಯ್ದೆ, 1993 ರ ಬಾಕಿ ಇರುವ ಸಾಲಗಳ ವಸೂಲಾತಿಯ ಸೆಕ್ಷನ್ 19 ರಲ್ಲಿ ನಿಮ್ಮ ವಿರುದ್ಧ ರೂ. 40,88,576/– (ನಲವತ್ತು ಲಕ್ಷ ಎಂಬತ್ತೆಂಟು ಸಾವಿರದ ಐದು ನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಮೊತ್ತವನ್ನು ಪ್ರಸ್ತುತ ಮತ್ತು ಭವಿಷ್ಯದ ಬಡ್ಡಿ, ವೆಚ್ಚ ಮತ್ತು ಇತರ ಪರಿಹಾರಗಳೊಂದಿಗೆ ವಸೂಲಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಮೇಲೆ ತಿಳಿಸಿದ ಪ್ರತಿವಾದಿಯು ನ್ಯಾಯಮಂಡಳಿಯ ಮುಂದೆ ನೇರವಾಗಿ ಹಾಜರಾಗಬೇಕಾಗುತ್ತದೆ, ಆದ್ದರಿಂದ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ 29/04/2026 ರಂದು ಬೆಳಿಗ್ಗೆ 10:30 ಕ್ಕೆ ಅರ್ಜಿಯನ್ನು ಏಕೆ ನೀಡಬಾರದು ಎಂಬುದರ ಕುರಿತು ಕಾರಣವನ್ನು ತೋರಿಸಲು ವಕೀಲರ ಮೂಲಕ ಅಥವಾ ಅಧಿಕೃತ ಏಜೆಂಟ್‌ಗಳ ಮೂಲಕ ನ್ಯಾಯಮಂಡಳಿಯ ಮುಂದೆ ಖುದ್ದಾಗಿ ಹಾಜರಾಗಬೇಕು.

ಪೂರ್ವನಿಯೋಜಿತವಲ್ಲದಿದ್ದರೆ ಅರ್ಜಿಯನ್ನು ಆಲಿಸಲಾಗುತ್ತದೆ ಮತ್ತು ನಿಮ್ಮ ಅನುಪಸ್ಥಿತಿಯಲ್ಲಿ ನಿರ್ಧರಿಸಲಾಗುತ್ತದೆ.

ಮಾರ್ಚ್ 11, 2026 ರಂದು ನ್ಯಾಯಮಂಡಳಿಯ ಮುದ್ರೆಯಡಿಯಲ್ಲಿ ನೀಡಲಾಗಿದೆ.

ರಿಜಿಸ್ಟ್ರಾರ್
ಸಾಲ ವಸೂಲಾತಿ ನ್ಯಾಯಮಂಡಳಿ
ಬೆಂಗಳೂರು

ತುಂಬಿದ ಮನೆಗೊಂದು ಚಂದದ ಸಾಪ್ತಾಹಿಕ
ತಪ್ಪದೇ ಓದಿ
ಕರ್ಮವೀರ
ಎಲ್ಲ ಬುಕ್‌ಸ್ಟಾಲ್‌ಗಳಲ್ಲಿ ಲಭ್ಯ

बैंक ऑफ महाराष्ट्र Bank of Maharashtra

भारत सरकार का उद्यम

ಬ್ಯಾಂಕ್ ಆಫ್ ಮಹಾರಾಷ್ಟ್ರ, ಅಸೆಟ್ ರಿಕವರಿ ಶಾಖೆ, ಬೆಂಗಳೂರು
ನಂ. 465/ಎ, 22ನೇ ಕ್ರಾಸ್, 3ನೇ ಬ್ಲಾಕ್, NMKRV ಮಹಿಳಾ ಕಾಲೇಜು ಎದುರು,
ಜಯನಗರ, ಬೆಂಗಳೂರು – 560011. ದೂರವಾಣಿ : 080-4656 1236,
ಇ–ಮೇಲ್ : brmgr1934@bankofmaharashtra.bank.in
ಪ್ರಧಾನ ಕಛೇರಿ : ಲೋಕಮಂಗಲ, 1501, ಶಿವಾಜಿನಗರ, ಪುಣೆ – 411005

ಸ್ಥಿರಾಸ್ತಿಗಳ ಮಾರಾಟಕ್ಕೆ ಅಧಿಸೂಚನೆ (ಅನುಬಂಧ IV-A)

ನಿಯಮ ೨೦೦೨ ರ ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ ೨೦೦೨ ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ಪ್ರೊವಿಜನ್ ನಿಯಮ ೮(೬)ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ೨೦೦೨ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.
ಈ ಮೂಲಕ ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಸೂಚಿಸುವುದೇನೆಂಧರೆ ಭದ್ರತಾ ಸಾಲದಾತರಿಗೆ ಅಡಮಾನ ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಸ್ಥಿರಾಸ್ತಿಗಳನ್ನು, **ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಮಹಾರಾಷ್ಟ್ರ** ಇವರು ಸ್ವಾಧೀನ ಪಡಿಸಿಕೊಂಡಿದ್ದು, ಸದರಿ ಆಸ್ತಿಗಳನ್ನು ಇ–ಹರಾಜಿನ ಮೂಲಕ **"ಎಲ್ಲ ಹೇಗಿದೆಯೋ ಹಾಗೆಯೇ", ಎಲ್ಲ ಇದೆಯೋ ಹಾಗೆಯೇ"** ಮತ್ತು **"ಎಲ್ಲ ಇದೆಯೋ ಹಾಗೆಯೇ"**, ದಿನಾಂಕ : **17.04.2026** ರಂದು ಮಾರಾಟ ಮಾಡಲಾಗುವುದು ಎಂದು ಸೂಚನೆ ನೀಡಲಾಗಿದೆ. ಈ ಕೋಷ್ಟಕದಲ್ಲಿ ಉಲ್ಲೇಖಿಸಿರುವಂತೆ, **ಬ್ಯಾಂಕ್ ಆಫ್ ಮಹಾರಾಷ್ಟ್ರಕ್ಕೆ** ಬಾಕಿ ಇರುವ ಬಾಕಿಯನ್ನು ವಸೂಲಿ ಮಾಡಲು ಬಾಕಿ ಮೊತ್ತ, ಸ್ಥಿರಾಸ್ತಿಯ ಸಂಕ್ಷಿಪ್ತ ವಿವರಣೆ ಮತ್ತು ಅವುಗಳ ಮೇಲಿನ ಋಣಭಾರಗಳು, ಸ್ವಾಧೀನದ ಪ್ರಕಾರ, ಮೀಸಲು ಬೆಲೆ ಮತ್ತು ಮುಂಗಡ ಹಣ ಠೇವಣಿಯನ್ನೂ ಸಹ ಈ ಕೆಳಗಿನಂತೆ ನೀಡಲಾಗಿದೆ.

ಕ್ರ. ಸಂ.	ಸಾಲಗಾರರ ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ಸಂಕ್ಷಿಪ್ತ ವಿವರಣೆ	ದಿನಾಂಕ : 30/03/2026 ರಿಂದ ಬಾಕಿ ಮೊತ್ತ ಸ್ವಾಧೀನ ವಿಧ ಹೊಣೆಗಾರಿಕೆಗಳು	ಮೀಸಲು ಬೆಲೆ ಇ.ಎಂ.ಡಿ. ಬಿಡ್ ಹೆಚ್ಚಳ ಮೊತ್ತ
1.	**ಅಸೆಟ್ ರೀಕವರಿ ಶಾಖೆ (ಮೊಬೈಲ್ : 9594544454)** **ಸಾಲಗಾರ/ರು :** **ಮೆ॥ ಕಾಕುಡ ಇನ್ಫ್ರಾ ಪ್ರೈವೇಟ್ ಲಿಮಿಟೆಡ್** ನಂ. 1014, 4ನೇ ಬ್ಲಾಕ್, 6ನೇ ಕ್ರಾಸ್ ರಸ್ತೆ, 1ನೇ ಸ್ಟೇಜ್, ಹೆಚ್.ಬಿ.ಆರ್. ಲೇಔಟ್, ಬೆಂಗಳೂರು – 560 043. **ಜಾಮೀನುದಾರ/ರು :** **ಶ್ರೀ ಶಕ್ತಿ ವೆಂಕಟೇಶ ಮಹೇಶ್ವರಿ** ಫ್ಲ್ಯಾಟ್ ನಂ. 102, ನೆಲ ಮಹಡಿ, ಬೃಂದಾವನ ಅಪಾರ್ಟ್‌ಮೆಂಟ್ಸ್, ಅಶೋಕಪುರಂ ಮೇನ್ ರೋಡ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560 086. **ಶ್ರೀ ವೆಂಕಟ ಬ್ರಹ್ಮಯ್ಯ ಕುತಾಳ** ಇಲ್ಲಿ ಮನೆ ನಂ. 14, ಪೂಜಾ ಗಾರ್ಡನ್ಸ್, ಆಂಜನೇಯ ಸ್ವಾಮಿ ದೇವಸ್ಥಾನ ಚನ್ನಸಂದ್ರ, ಬೆಂಗಳೂರು – 560016. **ಶ್ರೀಮತಿ ಮಮತಾ ಕೋಂ. ರಾಜ @ ರಾಜು ಎಸ್.ಸಿ. &** **ಶ್ರೀ ರಾಜ @ ರಾಜು ಎಸ್.ಸಿ. ಈ ಇಬ್ಬರೂ ವಾಸ ಇಲ್ಲ** ನಂ. 25, ಸುಗ್ಗಟ್ಟ ಗ್ರಾಮ, ಹುಣಸಮಾರನಹಳ್ಳಿ, ಹೊಸಹಳ್ಳಿ, ಬೆಂಗಳೂರು – 562 157.	ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ವಸತಿ ಭೂಮಿ ಇದರ ಸೈಟ್ ನಂ. 17 & 18, ಅಸೆಸ್‌ಮೆಂಟ್ ನಂ. 183/3, ಖಾತೆ ನಂ. 674/633/1/17 & 674/633/2/18, ಒಟ್ಟು ವಿಸ್ತೀರ್ಣ ಪ್ರದೇಶ 2760 ಚದರ ಅಡಿ (ಸೈಟ್ ನಂ. 17:1260 ಚದರ ಅಡಿ & ಸೈಟ್ ನಂ. 18:1500 ಚದರ ಅಡಿ ಮತ್ತು ವಸತಿ ಕಟ್ಟಡ ಸಂಯೋಜಿತ ಜಿ + 3 ನಿರ್ಮಿತ ಇದರೊಂದಿಗೆ ಒಟ್ಟು ವಿಸ್ತೀರ್ಣ ಬಿಲ್ಟ್ ಅಪ್ ಪ್ರದೇಶ 2000 ಚದರ ಅಡಿ ಪ್ರತಿ ಮಹಡಿಯೊಂದಿಗೆ ಸ್ಥಾಪಿಸಿ ಹಾಗೂ ಸ್ಥಿರಾಸ್ತಿಯು ಹುಣಸಮಾರನಹಳ್ಳಿ ಗ್ರಾಮ, ಸುಗ್ಗಟ್ಟ ರಸ್ತೆ, ಜಾಲ ಹೋಬಳಿ, ಬೆಂಗಳೂರು – 562 157 ಇಲ್ಲಿ ನೆಲೆಗೊಂಡಿರುತ್ತದೆ.	ರೂ. 10,22,57,921.00 ಜೊತೆಗೆ ಹೆಚ್ಚುವರಿ ಬಡ್ಡಿ ಅನ್ವಯಿಸುವ ದಿನಾಂಕ : 31.03.2026 ರಿಂದ ಜೊತೆಗೆ ಎಲ್ಲಾ ಶುಲ್ಕಗಳು, ದಂಡ, ವೆಚ್ಚಗಳು ಮತ್ತು ಇತರೆ ಪ್ರಾಸಂಗಿಕ ಶುಲ್ಕಗಳು ಇದರೊಂದಿಗೆ ಸಾಂಕೇತಿಕ ಇಲ್ಲ	ರೂ. 307.24 ಲಕ್ಷ ಮೀಸಲು ಬೆಲೆಯ 10% ರೂ. 50,000/-
2.	**ಅಸೆಟ್ ರೀಕವರಿ ಶಾಖೆ (ಮೊಬೈಲ್ : 9594544454)** **ಸಾಲಗಾರ/ರು :** **ಶ್ರೀ ವಿಶಾಲ್ ಶ್ರೀನಿವಾಸನ್ ಬಿನ್ ವಿ. ಶ್ರೀಧರ,** ನಂ. 8, 1ನೇ ಮಹಡಿ, 6ನೇ ಮೇನ್, ವಿಕ್ಟೋರಿಯಾ ಲೇಔಟ್, ಬೆಂಗಳೂರು – 560 047. **ಜಾಮೀನುದಾರ/ರು :** **ಶ್ರೀ ದೀಪಕ್ ಸಾಮಸಿ ಬಿನ್ ಡೇವಿಡ್ ಸಾಮಸಿ** ನಂ. 14/9, 3ನೇ ಮೇನ್ ರೋಡ್, ಸೆಂಟ್ ಥಾಮಸ್ ಟೌನ್ ಪೋಸ್ಟ್, ಕಮ್ಮನಹಳ್ಳಿ, ಬೆಂಗಳೂರು – 560 047.	ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ 2 ಬಿ.ಹೆಚ್.ಕೆ. ವಸತಿಯುತ ಫ್ಲಾಟ್ ನಂ. 2ಸಿ ಇದು 2ನೇ ಮಹಡಿಯಲ್ಲಿದ್ದು, ಇದನ್ನು "ವೈ.ಎಸ್. ಅಪಾರ್ಟ್‌ಮೆಂಟ್" ಎಂದು ಕರೆಯಲ್ಪಡುವ ಕಟ್ಟಡದಲ್ಲಿ 1133 ಚದರ ಅಡಿ ವಿಸ್ತೀರ್ಣದಲ್ಲಿದ್ದು, ಒಂದು ಕಾರು ಪಾರ್ಕಿಂಗ್ ಜೊತೆಗೆ 400 ಚದರ ಅಡಿ ಅವಿಭಜಿತ ಪಾಲು ಭೂಮಿ ಹಕ್ಕು, ಹಕ್ಕು ಮತ್ತು ಆಸ್ತಿಯಲ್ಲಿನ ಹಿತಾಸಕ್ತಿಯೊಂದಿಗೆ ಇರುವ ಸ್ಥಿರಾಸ್ತಿಯು ಗುರುದತ್ತ ಲೇಔಟ್, ಹೊಸಕೆರೆಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು – 560 085 ಇಲ್ಲಿ ಸರ್ವೆ ನಂ. 6/2 ರಲ್ಲಿ ಸ್ಥಾಪಿಸಿ ರಚಿಸಲಾದ ಭೂಮಿ ಇದರ ನಂ. 4, 5, 6, 3 ಮತ್ತು 3ಎ ನಂ.ಗಳನ್ನು ಹೊಂದಿರುವ ಭೂಮಿಯಲ್ಲಿ ನಿರ್ಮಿಸಲಾಗಿದೆ.	ರೂ. 91,01,678.00 ಜೊತೆಗೆ ಹೆಚ್ಚುವರಿ ಬಡ್ಡಿ ಅನ್ವಯಿಸುವ ದಿನಾಂಕ : 31.03.2026 ರಿಂದ ಜೊತೆಗೆ ಎಲ್ಲಾ ಶುಲ್ಕಗಳು, ದಂಡ, ವೆಚ್ಚಗಳು ಮತ್ತು ಇತರೆ ಪ್ರಾಸಂಗಿಕ ಶುಲ್ಕಗಳು ಇದರೊಂದಿಗೆ ಭೌತಿಕ ಇಲ್ಲ	ರೂ. 32.63 ಲಕ್ಷ ಮೀಸಲು ಬೆಲೆಯ 10% ರೂ. 15,000/-

- ◆ ಇ-ಹರಾಜಿನ ದಿನಾಂಕ ಮತ್ತು ಸಮಯ : 17-04-2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 01.00 ರವರೆಗೆ.
- ◆ ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ : 10-04-2026 ರಿಂದ 16-04-2026 ರವರೆಗೆ ಪೂರ್ವ ನೇಮಕಾತಿಯೊಂದಿಗೆ (ರಜಾ ದಿನಗಳನ್ನು ಹೊರತುಪಡಿಸಿ)
- ◆ ಬಿಡ್ / ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 17-04-2026 ಮಧ್ಯಾಹ್ನ 01.00 ರವರೆಗೆ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಬ್ಯಾಂಕ್ ಆಫ್ ಮಹಾರಾಷ್ಟ್ರದ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅಂದರೆ, "https://www.bankofmaharashtra.in/properties for sale" & "https://baanknet.com" ಅನ್ನು ಉಲ್ಲೇಖಿಸಿ.

ಸರ್ಫೇಸಿ ಕಾಯ್ದೆ, ೨೦೦೨ ರ ಅಡಿಯಲ್ಲಿ ಶಾಸನಬದ್ಧ ೧೫ ದಿನಗಳ ಮಾರಾಟ ಸೂಚನೆ

ಈ ಮೇಲ್ಕಂಡಂತೆ ಹೆಸರಿಸಲಾದ ಸಾಲಗಾರರು/ರು ಮತ್ತು ಜಾಮೀನುದಾರರು/ಗಳು ಹರಾಜಿನ ದಿನಾಂಕದ ಮೊದಲು ದಿನಾಂಕಿತ ಬಡ್ಡಿ ಮತ್ತು ಪೂರಕ ವೆಚ್ಚಗಳೊಂದಿಗೆ ಮೇಲೆ ತಿಳಿಸಿದ ಮೊತ್ತವನ್ನು ಪಾವತಿಸಲು ಈ ಮೂಲಕ ಸೂಚಿಸಲಾಗಿದೆ, ಇಲ್ಲದಿದ್ದರೆ ಆಸ್ತಿಯನ್ನು ಹರಾಜು ಮಾಡಲಾಗುತ್ತದೆ/ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿ ಉಳಿದಿದ್ದರೆ ಅದನ್ನು ಬಡ್ಡಿ ಮತ್ತು ವೆಚ್ಚದೊಂದಿಗೆ ವಸೂಲಿ ಮಾಡಲಾಗುತ್ತದೆ.

ದಿನಾಂಕ : 31-03-2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಮಹಾರಾಷ್ಟ್ರ, ಅಸೆಟ್ ರೀಕವರಿ ಶಾಖೆ

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS • DEPOSITS
ಕೆಂಗೇರಿ ಶಾಖೆ

ನಂ. 445, ನೆಲ ಮಹಡಿ, 4ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ,
ಶ್ರೇಯ ಹಾಸ್ಪಿಟಲ್ ಹತ್ತಿರ, ಕೆಂಗೇರಿ ಸ್ಯಾಟಲೈಟ್ ಟೌನ್,
ಬೆಂಗಳೂರು – 560 060ಫೋನ್ : 080–28486098/99,
ಮೊಬೈಲ್: 7625079154
e-Mail: kengeri@canfinhomes.com
CIN No. L85110KA1987PLC008699

ಸ್ವಾಧೀನ ನೋಟೀಸ್ (ಸ್ಥಿರಾಸ್ತಿಗಾಗಿ) ನಿಯಮ 8(1)

ಕೆಳಸಹಿದಾರರು, **ಕ್ಯಾನ್ ಫಿನ್ ಹೋಮ್ಸ್ ಲಿ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅನ್ವಯ ಮತ್ತು 2002 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.10,59,087/–** (ರೂಪಾಯಿ ಹತ್ತು ಲಕ್ಷ ಐವತ್ತೊಂಬತ್ತು ಸಾವಿರದ ಎಂಬತ್ತೇಳು ಮಾತ್ರ) ಮತ್ತು ಒಪ್ಪಿದ ದರದಲ್ಲಿ ಮುಂದಿನ ಬಡ್ಡಿ ಮತ್ತು ಸಾಂಧರ್ಭಿಕ ಖರ್ಚು, ವೆಚ್ಚಗಳನ್ನು ಮರು ಪಾವತಿಮಾಡಲು ಸಾಲಗಾರರಾದ **ಶ್ರೀ ದೇವರಾಜು ಕೆ., ಮತ್ತು ಶ್ರೀಮತಿ ಶೋಭಾ** ಇವರಿಗೆ ದಿನಾಂಕ **02.12.2024** ರಂದು ತಗಾದೆ ಸೂಚನೆಯನ್ನು ನೀಡಲಾಗಿತ್ತು.

ಸಾಲಗಾರರು ಸಾಲದ ಹಣವನ್ನು ಮರುಪಾವತಿ ಮಾಡಲಿಲ್ಲವಾದುದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಆಕ್ಟ್‌ನ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಸೆಕ್ಷನ್ 13ರ ಸಬ್ ಸೆಕ್ಷನ್ (4)ರ ನಿಯಮ 8 ರಲ್ಲಿ ಪ್ರದತ್ತ ಅಧಿಕಾರದನ್ವಯ ದಿನಾಂಕ **27.03.2026** ರಂದು ಕೆಳಗೆ ವಿವರಿಸಿದ ಸ್ವತ್ತನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಅವಕಾಶ ಕಾಯಿದೆಯ ಸೆಕ್ಷನ್ 13ರ ಸಬ್ ಸೆಕ್ಷನ್ (8)ರ ಅನ್ವಯ ಇರುತ್ತದೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, ಯಾರೂ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತುಗಳ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ, ಅದು **ಕ್ಯಾನ್ ಫಿನ್ ಹೋಮ್ಸ್ ಲಿ.,** ಇವರಿಗೆ ಕೆಳಗೆ ಸೂಚಿಸಿರುವಂತೆ ಬರಬೇಕಾದ ಬಾಕಿ ಮೊತ್ತ **ರೂ.10,59,087/–** (ರೂಪಾಯಿ ಹತ್ತು ಲಕ್ಷ ಐವತ್ತೊಂಬತ್ತು ಸಾವಿರದ ಎಂಬತ್ತೇಳು ಮಾತ್ರ) ಮತ್ತು ಬಡ್ಡಿ ಮತ್ತು ಇತರ ಸಾಂದರ್ಭಿಕ ವೆಚ್ಚಗಳಿಗೆ ಋಣ ಬಾಧ್ಯವಾಗಿರುತ್ತದೆ.

ಸ್ಥಿರಾಸ್ತಿಯ ವಿವರ

ಬೆಂಗಳೂರು ಉತ್ತರ ತಾಲೂಕು, ಯಶವಂತಪುರ ಹೋಬಳಿ, ಚಿಕ್ಕಬಾಣಾವರ ಗ್ರಾಮ, ಇಲ್ಲಿರುವ ನಿವೇಶನ ನಂ. 13, ಖಾತಾ ನಂ. 118, ಅಸೆಸ್‌ಮೆಂಟ್ ನಂ. 118/1ಎ, ಅಳತೆ ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಒಟ್ಟು 1200 ಚದರ ಅಡಿ ಅಳತೆಯಲ್ಲಿ ಮನೆಯನ್ನು ಹೊಂದಿರುವ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ. 12, ಪಶ್ಚಿಮಕ್ಕೆ: ನಿವೇಶನ ನಂ. 14, ದಕ್ಷಿಣಕ್ಕೆ: 25 ಅಡಿ ರಸ್ತೆ, ಉತ್ತರಕ್ಕೆ: ಇತರರ ಆಸ್ತಿ.

ದಿನಾಂಕ : 31.03.2026
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ,
ಕ್ಯಾನ್‌ಫಿನ್ ಹೋಮ್ಸ್ ಲಿ.,

ಗೌರವಾನ್ವಿತ ಸಾಲ ವಸೂಲಾತಿ ನ್ಯಾಯಮಂಡಳಿ
II ರ ಮೊದಲು ಬೆಂಗಳೂರು, BSNL ಕಟ್ಟಡ
4 ನೇ ಮಹಡಿ, ರಾಜಭವನ ರಸ್ತೆ, ಬೆಂಗಳೂರು
O.A.NO.882/2022

ನಡುವೆ:
ಮೆಸರ್ಸ್ ಐಸಿಐಸಿಐ ಬ್ಯಾಂಕ್ ಲಿಮಿಟೆಡ್
ತನ್ನ ಶಾಖಾ ಕಚೇರಿಯನ್ನು ಇಲ್ಲಿ ಹೊಂದಿದೆ: ಸಂಖ್ಯೆ 4/10, ಮೈತ್ರೀ ಸೆಂಟರ್ ಹೊಸೂರು ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು–560 068. ...**ಅರ್ಜಿದಾರರು**

ಮತ್ತು:
ಶ್ರೀ ಎಂ. ಮಹೇಶ್
S/o. ಶ್ರೀ ಹೊನ್ನಪ್ಪ ಮಲ್ಲಿಕಾರ್ಜುನ
ವಯಸ್ಸು ಸುಮಾರು 44 ವರ್ಷ, ಸಂಖ್ಯೆ 18/11, 3ನೇ ಮಹಡಿ, 8ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಗಣೇಶ ಬ್ಲಾಕ್, ಪಂಚಮುಖಿ ದೇವಸ್ಥಾನದ ಹತ್ತಿರ, ಮಹಾಲಕ್ಷ್ಮಿ ಲೇಔಟ್, ವಾರ್ಡ್ 68, ಬೆಂಗಳೂರು–560086.
...**ಪ್ರತಿವಾದಿ**

ಕಾಗದ ಪ್ರಕಟಣೆಯ ಮೂಲಕ 1993 ರ ಸಾಲ ವಸೂಲಾತಿ ನ್ಯಾಯಮಂಡಳಿ (ಕಾರ್ಯವಿಧಾನ) ನಿಯಮಗಳ 23(VIII) ನಿಯಮವನ್ನು ಪ್ರತಿವಾದಿಸಲು ಸಮನ್ಸ್ ನೀಡಲಾಗಿದೆ.

ಎಲ್ಲಿದೆ: ಅರ್ಜಿದಾರರು ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳ ಕಾಯ್ದೆ 1993 ರ ಸಾಲಗಳ ವಸೂಲಾತಿ ಸೆಕ್ಷನ್ 19 ರಲ್ಲಿ ನಿಮ್ಮ ವಿರುದ್ಧ 33,98,672.18/– ರೂ. (ಮೂವತ್ತೂರು ಲಕ್ಷ ತೊಂಬತ್ತೆಂಟು ಸಾವಿರದ ಆರುನೂರ ಎಪ್ಪತ್ತೆರಡು ಮತ್ತು ಪೈಸಾ ಹದಿನೆಂಟು ಮಾತ್ರ) ಮೊತ್ತವನ್ನು ವಸೂಲಿ ಮಾಡುವಂತೆ ಅರ್ಜಿಯನ್ನು ಸಲ್ಲಿಸಲಾಗಿದೆ. ಆದ್ದರಿಂದ ಮೇಲೆ ತಿಳಿಸಲಾದ ಪ್ರತಿವಾದಿಯು ವಕೀಲರ ಮೂಲಕ ಅಥವಾ ಅಧಿಕೃತ ಏಜೆಂಟ್‌ಗಳ ಮೂಲಕ ನ್ಯಾಯಮಂಡಳಿಯ ಮುಂದೆ ನೇರವಾಗಿ ಹಾಜರಾಗಬೇಕಾಗುತ್ತದೆ, ಅವರು ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗೆ ಅಥವಾ 29.07.2026 ರಂದು ಬೆಳಿಗ್ಗೆ 10.30 ಕ್ಕೆ ಅರ್ಜಿಯನ್ನು ಏಕೆ ನೀಡಬಾರದು ಎಂಬುದಕ್ಕೆ ಕಾರಣ ತೋರಿಸಲು ತಮ್ಮ ಪ್ರತಿವಾದವನ್ನು ಬೆಂಬಲಿಸುತ್ತಾರೆ.

ತಪ್ಪಿದಲ್ಲಿ ಅರ್ಜಿಯನ್ನು ಆಲಿಸಲಾಗುತ್ತದೆ ಮತ್ತು ನಿಮ್ಮ ಅನುಪಸ್ಥಿತಿಯಲ್ಲಿ ತೀರ್ಮಾನಿಸಲಾಗುತ್ತದೆ ಎಂಬುದನ್ನು ಗಮನಿಸಿ.

ಈ 11ನೇ ದಿನದ 11ನೇ ಮಾರ್ಚ್ 2026 ದಿನದಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಮಂಡಳಿಯ ಮುದ್ರೆಯೊಂದಿಗೆ ನೀಡಲಾಗಿದೆ.

ರಿಜಿಸ್ಟ್ರಾರ್
ಸಾಲ ವಸೂಲಾತಿ ನ್ಯಾಯಮಂಡಳಿ,
ಬೆಂಗಳೂರು

ಟ್ರುಹೋಂ ಫೈನಾನ್ಸ್ ಲಿಮಿಟೆಡ್

(ಈ ಹಿಂದೆ ಶ್ರೀರಾಮ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)

Truhome FINANCE

ನೋಂದಾಯಿತ ಕಚೇರಿ: ಶ್ರೀನಿವಾಸ ಟವರ್, 1ನೇ ಮಹಡಿ, ಬಾಗಿಲು ಸಂಖ್ಯೆ 5, ಹಳೆಯ ಸಂಖ್ಯೆ 11, 2ನೇ ಲೇನ್, ಸ್ಮಾರಕ ರಸ್ತೆ, ಅಲ್ವಾರ್‌ಪೇಟೆ, ತೇನಾಂಪೇಟ್, ಚೆನ್ನೈ–600018.
ಪ್ರಧಾನ ಕಚೇರಿ: ಹಂತ 3, ವೋಕ್ಹಾರ್ಡ್ ಟವರ್ಸ್, ಈಸ್ಟ್ ವಿಂಗ್ ಸಿ –2 ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ 400 051. ವೆಬ್‌ಸೈಟ್: http://www.truhomefinance.in

ತಗಾದೆ ನೋಟಿಸ್

ಈ ಮೂಲಕ ಸೂಚನೆ ನೀಡುವುದೇನೆಂದರೆ, ಈ ಕೆಳಗಿನ ಸಾಲಗಾರರು/ರು ಟ್ರುಹೋಮ್ ಫೈನಾನ್ಸ್ ಲಿಮಿಟೆಡ್ (ಹಿಂದೆ ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) ನಿಂದ ಪಡೆದ ಸಾಲ ಸೌಲಭ್ಯಗಳ ಮರುಪಾವತಿ ಮತ್ತು ಬಡ್ಡಿ ಪಾವತಿಯಲ್ಲಿ ತಪ್ಪು ಎಸಗಿದ್ದಾರೆ ಮತ್ತು ಸದರಿ ಸಾಲ ಖಾತೆಗಳನ್ನು ನಿಷ್ಕ್ರಿಯ ಆಸ್ತಿಗಳು (ಓಕಂ) ಎಂದು ವರ್ಗೀಕರಿಸಲಾಗಿದೆ. ಅವರಿಗೆ ಆರ್ಥಿಕ ಸ್ವತ್ತುಗಳ ಭದ್ರತೆ ಪುನರ್ ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆ 2002 (SARFAESI ACT) ನ ಸೆಕ್ಷನ್ 13(2) ರ ಅಡಿಯಲ್ಲಿ ಅವರ ಇತ್ತೀಚಿನ ತಿಳಿದಿರುವ ವಿಳಾಸದಲ್ಲಿ ತಗಾದೆ ನೋಟಿಸ್ ನೀಡಲಾಗಿದೆ. ಸದರಿ ತಗಾದೆ ನೋಟಿಸ್ ಜೊತೆಗೆ, ಅವರಿಗೆ ಈ ಸಾರ್ವಜನಿಕ ಸೂಚನೆಯ ಮೂಲಕ ತಿಳಿಸಲಾಗಿದೆ.
ಸಾಲಗಾರರು, ಭದ್ರತೆ, ಬಾಕಿ ಬಾಕಿಗಳು, ಸೆಕ್ಷನ್ 13(2) ರ ಅಡಿಯಲ್ಲಿ ಕಳುಹಿಸಲಾದ ತಗಾದೆ ನೋಟಿಸ್‌ಗಳು ಮತ್ತು ಅಲ್ಲಿ ಕ್ಲೈಮ್ ಮಾಡಲಾದ ಮೊತ್ತದ ವಿವರಗಳು:

ಸಾಲಗಾರ/ಸಹ–ಸಾಲಗಾರ/ ಹೆಸರು ಮತ್ತು ವಿಳಾಸ	ಭದ್ರತಾ ಆಸ್ತಿಗಳ ವಿಳಾಸ	ತಗಾದೆ ನೋಟಿಸ್ ದಿನಾಂಕ ಮತ್ತು ಬಾಕಿ ಮೊತ್ತ ರೂ.ಗಳಲ್ಲಿ
ಲ್ಯಾನ್ ಸಂಖ್ಯೆ – SLPHTMKR0000022/ SLPHTMKR0000023. 1.ಶ್ರೀ ಸೈಯದ್ ರೋಶನ್ ತಂದೆ ಸೈಯದ್ ಸುಭಾನ್, (ಸಾಲಗಾರ) 2.ಶ್ರೀ ಸೈಯದ್ ಸುಭಾನ್ ತಂದೆ ಸೈಯದ್ ಬುಡೇನ್ಸಾಬ್, (ಸಹ–ಸಾಲಗಾರ) 3.ಶ್ರೀಮತಿ. ರೇಷ್ಮಾ ಬಾನು ಗಂಡ ಸೈಯದ್ ಸುಭಾನ್, (ಸಹ ಸಾಲಗಾರರು) ವಾಸ: ನೂರಾನಿ ಮಸೀದಿ ಹಿಂಭಾಗ, ಸೋಂಪುರ, ದಾಬಸ್‌ಪೇಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ, ಕರ್ನಾಟಕ – 562111 ಹಾಗೂ: ಖಾತಾ ನಂ.1011/1020, ಖಾತಾ ನಂ.150300701600901223, ಸೈ ನಂ.113/2, ಸೋಂಪುರ ಗ್ರಾಮ, ಸೋಂಪುರ ಹೋಬಳಿ, ನೂರಾನಿ ಮಸೀದಿ ಹತ್ತಿರ, ನೆಲಮಂಗಲ, ಬೆಂಗಳೂರು ಗ್ರಾಮಾಂತರ, ಕರ್ನಾಟಕ – 562111 ಹಾಗೂ: ಶ್ರೀ. ಸೈಯದ್ ರೋಶನ್ ಎಸ್‌ಆರ್ ಕಲೆಕ್ಷನ್ಸ್, ಪ್ರೊಪ್ರೈಟರ್, ಕಣೆಸುಮರಿ ನಂ. 190/304/22/1, ದಾಬಸ್ಪೇಟ್, ಸೋಂಪುರ ಹೋಬಳಿ, KSRTC ಬಸ್ ನಿಲ್ದಾಣದ ಹತ್ತಿರ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ, ಕರ್ನಾಟಕ – 562111. ಹಾಗೂ: ಶ್ರೀ. ಸೈಯದ್ ಸುಭಾನ್ ಪ್ರಿನ್ಸ್ ಜನರಲ್ ಸ್ಟೋರ್ಸ್, ಪ್ರೊಪ್ರೈಟರ್, ಅಂಗಡಿ ನಂ. 2, NH-4, ಪ್ರಿನ್ಸ್ ಹೋಟೆಲ್ ಹತ್ತಿರ, ಕಲುವನಹಳ್ಳಿ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ, ಕರ್ನಾಟಕ – 562127. ಸಾಲದ ಮೊತ್ತ – ರೂ. 40,00,000/ರೂ.88367 LAN: SLPHTMKR0000022/SLPHTMKR0000023. NPA: ದಿನಾಂಕ – 05.03.2026	ಸ್ವತ್ತಿನ ಎಲ್ಲ ಭಾಗ ವಿಭಾಗ ಸೇರಿ ಗ್ರಾಮ ಪಂಚಾಯತ್ ಕಥಾ ಸಂಖ್ಯೆ 1011/1020 ಮತ್ತು ಇ–ಖಾತಾ ಸಂಖ್ಯೆ 150300701600901223 (ವಿಭಾಗ ಸಂಖ್ಯೆ 113/2 ರಲ್ಲಿ ರಚಿಸಲಾಗಿದೆ) ಅಳತೆ ಪೂರ್ವದಿಂದ ಪಶ್ಚಿಮಕ್ಕೆ: 9.14 ಮೀ ಮತ್ತು ದಕ್ಷಿಣಕ್ಕೆ ಉತ್ತರ: 12.19 ಮೀ ಸೋಂಪುರ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದೆ ಮತ್ತು ಚಕಬಂದಿ:– ಪೂರ್ವ: ರಸ್ತೆ, ಪಶ್ಚಿಮ: ಗುಲಾಬ್‌ರವರ ಜಮೀನು, ಉತ್ತರ: ರಸ್ತೆ, ದಕ್ಷಿಣ: ಇತರ ಖಾಲಿ ಸ್ಥಳಗಳಿಗೆ ಸೇರಿರುವ ಭೂಮಿ.	ತಗಾದೆ ನೋಟಿಸ್ ದಿನಾಂಕ – 30 ಮಾರ್ಚ್, 2026. ತಗಾದೆ ನೋಟಿಸ್ ಮೊತ್ತ : ರೂ.39,02,925/– (ರೂಪಾಯಿ ಮೂವತ್ತೊಂಬತ್ತು ಲಕ್ಷ ಎರಡು ಸಾವಿರ ಒಂಬತ್ತು ನೂರ ಇಪ್ಪತ್ತೈದು ಮಾತ್ರ) 25/03/2026 ರಂತೆ ಸಾಲ ಖಾತೆ ಸಂಖ್ಯೆ SLPHTMKR0000022 ರ ಉಲ್ಲೇಖದಡಿಯಲ್ಲಿ ಮತ್ತು ರೂ.84,136/– (ರೂಪಾಯಿ ಎಂಬತ್ತನಾಲ್ಕು ಸಾವಿರದ ನೂರ ಮೂವತ್ತಾರು) 25/03/2026 ರಂತೆ ಸಾಲ ಖಾತೆ ಸಂಖ್ಯೆ SLPHTMKR0000023 ರ ಉಲ್ಲೇಖದಡಿಯಲ್ಲಿ ಜೊತೆಗೆ ಇಲ್ಲಿಯವರೆಗೆ ಉಲ್ಲೇಖಿಸಿದಂತೆ ಹೆಚ್ಚಿನ ಬಡ್ಡಿ ಮತ್ತು ಪ್ರಾಸಂಗಿಕ ವೆಚ್ಚಗಳು, ವೆಚ್ಚಗಳು ಇತ್ಯಾದಿ.

ಆದಾಗ್ಯೂ ಸಾಲಗಾರರಾದ ನೀವು ಈ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಇಲ್ಲಿ ಉಲ್ಲೇಖಿಸಲಾದ ಬಾಕಿಗಳನ್ನು ಬಡ್ಡಿ ಮತ್ತು ದಂಡದ ಬಡ್ಡಿಯೊಂದಿಗೆ ಪೂರ್ಣವಾಗಿ ಪಾವತಿಸಲು ಕೋರಲಾಗಿದೆ, ಇದು ಬಾಕಿ ಬರಬಹುದು, ಇಲ್ಲದಿದ್ದರೆ ಕೆಳಗೆ ಸಹಿ ಮಾಡಿದವರು ಮೇಲೆ ತಿಳಿಸಲಾದ ಸೆಕ್ಯೂರಿಟಿಗಳನ್ನು ಜಾರಿಗೊಳಿಸಲು **SARFAESI** ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ಕಾಯ್ದೆಯ ಸೆಕ್ಷನ್ 13(13) ರ ಪ್ರಕಾರ, ಮೇಲೆ ಉಲ್ಲೇಖಿಸಲಾದ ಸೆಕ್ಯೂರಿಟಿಗಳನ್ನು ಮಾರಾಟ, ಗುತ್ತಿಗೆ ಅಥವಾ ನಮ್ಮ ಒಪ್ಪಿಗೆಯಿಲ್ಲದೆ ಬೇರೆ ರೀತಿಯಲ್ಲಿ ವರ್ಗಾಯಿಸುವುದನ್ನು ನಿರ್ಬಂಧಿಸಲಾಗಿದೆ.

ಸ್ಥಳ: ಬೆಂಗಳೂರು ಗ್ರಾಮಾಂತರ
ದಿನಾಂಕ: 01.04.2026

ಸಹಿ/– ಅಧಿಕೃತ ಅಧಿಕಾರಿ ಟ್ರುಹೋಂ ಫೈನಾನ್ಸ್ ಲಿಮಿಟೆಡ್
(ಈ ಹಿಂದೆ ಶ್ರೀರಾಮ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ, ROSARB - ಬೆಂಗಳೂರು ದಕ್ಷಿಣ, 4ನೇ ಮಹಡಿ, ವಿಜಯ ಟವರ್ಸ್
ಟ್ರಿನಿಟಿ ಸರ್ಕಲ್, ಬೆಂಗಳೂರು–560001. ದೂರವಾಣಿ ಸಂಖ್ಯೆ : 080–25011441, Extn. - 128,
ಇ–ಮೇಲ್: sarbes@bankofbaroda.com

ಇ–ಹರಾಜು ಮಾರಾಟ ಸೂಚನೆ ಇ–ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)

ನಿಯಮ 2002ರ ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ಪ್ರೊವಿಜನ್ ನಿಯಮ 8(6) ಮತ್ತು (9)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್‌ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಸದರಿ ಆಸ್ತಿಗಳನ್ನು, "ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ / ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಸಾಲಗಾರರ / ಅಡಮಾನದಾರ / ಜಾಮೀನುದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ / ಚರಾಸ್ತಿಯ ವಿವರಗಳು	ಖಾತೆ ಸಂಖ್ಯೆ ಬರಬೇಕಾದ ಬಾಕಿ ಮೊತ್ತ	ಇ–ಹರಾಜಿನ ದಿನಾಂಕ ಮತ್ತು ಸಮಯ	1) ಮೀಸಲು ಬೆಲೆ 2) ಇಎಂಡಿ 3) ಬಿಡ್ ಗುಣಾಂಕ ಮೊತ್ತ	ಸ್ವಾಧೀನದ ರೀತಿ (ರಚನಾತ್ಮಕವಾಗಿ/ ಭೌತಿಕವಾಗಿ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1) ಮೆ॥ ವೆಂಚರ್ ವರ್ಲ್ಡ್, ಮಾಲೀಕರು : ಶ್ರೀಮತಿ ಜಯಲಕ್ಷ್ಮಿ ಗೋಪಿನಾಥ್, ನೋಂದಾಯಿತ ಕಛೇರಿ : 86/1 – 74/75, ನೆಲಮಹಡಿ, 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085. 2) ಶ್ರೀಮತಿ ಜಯಲಕ್ಷ್ಮಿ ಗೋಪಿನಾಥ್ (ಮಾಲೀಕರು), ವಾಸಸ್ಥಳ : ನಂ. 18, 4ನೇ ಮೇನ್, 2ನೇ ಕ್ರಾಸ್, ಶ್ರೀನಿವಾಸನಗರ, ಬನಶಂಕರಿ 1ನೇ ಹಂತ, ಬೆಂಗಳೂರು–560050. 3) ಶ್ರೀ ರಮೇಶ್ .ಹೆಚ್.ಸಿ (ಜಾಮೀನುದಾರರು) ಬಿನ್ ಶ್ರೀ ಚಿನ್ನಯ್ಯ, ನಂ. 710, 2ನೇ ಕ್ರಾಸ್, 2ನೇ ಹಂತ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿನಗರ, ಬನಶಂಕರಿ, ಬೆಂಗಳೂರು–560050.	ವಾಸಯೋಗ್ಯ ಆಸ್ತಿ ನಂ. 25 ಮತ್ತು 26, ರಾಜರಾಜೇಶ್ವರಿನಗರ, ಸಿಎಂಸಿ ಖಾತಾ ನಂ. 238 & 237, ಮನೆ ನಂ. 137 & 122, ಬಿಬಿಎಂಪಿ ಖಾತಾ ನಂ. 225/25, 26/237/238/226, ಪಿಐಡಿ ನಂ. 160/W0429–12, ಇದು ಹಲಗೇವಡೇರಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು–560098 ರಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 69 ಅಡಿ, ಉತ್ತರದಿಂದ ದಕ್ಷಿಣಕ್ಕೆ 48 ಅಡಿ ಉತ್ತರದ ಕಡೆ ಮತ್ತು 42 ಅಡಿ ದಕ್ಷಿಣದ ಕಡೆ, ಒಟ್ಟು ವಿಸ್ತೀರ್ಣ 3105 ಚದರ ಅಡಿ ಮತ್ತು ಚಕ್ಕುಬಂದಿ : **ಪೂರ್ವಕ್ಕೆ** : ಸೈಟ್ ನಂ. 24, **ಪಶ್ಚಿಮಕ್ಕೆ** : ರಸ್ತೆ, **ಉತ್ತರಕ್ಕೆ** : ಸೈಟ್ ನಂ. 27, **ದಕ್ಷಿಣಕ್ಕೆ** : ರಸ್ತೆ. ಎನ್ಕಂಬರೆನ್ಸ್ : ಇಲ್ಲ	ಖಾತೆ ಸಂಖ್ಯೆ 27710400000176 ಬರಬೇಕಾದ ಬಾಕಿ ಮೊತ್ತ ರೂ. 64,69,423/– 29.03.2026 ರಂದು ಇದ್ದಂತೆ ಮತ್ತು ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ವೆಚ್ಚಗಳು ಹಾಗೂ ಪಾವತಿ ದಿನಾಂಕದವರೆಗಿನ ಇತರೆ ವೆಚ್ಚಗಳು	ದಿನಾಂಕ 17.04.2026 ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ	1) ಮೀಸಲು ಬೆಲೆ ರೂ. 2,90,95,000/- 2) ಇಎಂಡಿ ರೂ. 29,09,500/- 3) ಬಿಡ್ ಗುಣಾಂಕ ಮೊತ್ತ ರೂ. 25,000/-	ಸಾಂಕೇತಿಕವಾಗಿ (ಖಾಲಿ ಕಟ್ಟಡ)	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿಯೊಂದಿಗೆ (01.04.2026ರ ನಂತರ)

ಹರಾಜಿನ ಬಗ್ಗೆ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಈ ವೆಬ್‌ಸೈಟ್ ಲಿಂಕ್ **httgs://www.bankofbaroda.in/e-auction** ಮತ್ತು ಆನ್‌ಲೈನ್ ಆಕ್ಷನ್ ಪೋರ್ಟಲ್ **Baanknet.com.** ನ್ನು ನೋಡಿ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಬಾಕಿ ಇರುವ ಶುಲ್ಕಗಳು, ವಿದ್ಯುತ್ ಶುಲ್ಕಗಳು, ಇ–ಖಾತಾ ಶುಲ್ಕಗಳು ಅತಿ ಹೆಚ್ಚು ಬಿಡ್ ಮಾಡಿದವರು ಭರಿಸಬೇಕು, ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ದೂ. 080–25011441 ಮತ್ತು ಮೊಬೈಲ್ ನಂ. 9137960132 ಗೆ ಸಂಪರ್ಕಿಸಿ.

ದಿನಾಂಕ: 31.03.2026, ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ